'ನಿನ್ನ ಮನಸ್ಸಿಗೆ ಸಂತೋಷವಾಗಲಿ ಅಂತ ಮದ್ವೆಯಾದ ಹೊಸದರಲ್ಲಿ ಪೋಣಿಸಿದ ಹಸಿ ಸುಳ್ಳುಗಳನ್ನೇ ನೀನಿನ್ನೂ ನಿಜ ಅಂತ ನಂಬಿದ್ದೀಯಲ್ಲೇ ದಡ್ಡೀ' ಎಂದು ಕ್ಯಾತೆ ತೆಗೆದರೆ, 'ಹಂಗಾದ್ರೆ ನನ್ನ ಸೌಂದರ್ಯದ ಬಗ್ಗೆ ನುಡಿದ ವರ್ಣನೆಯ ಮಾತುಗಳ ಕಥೆಯೇನು' ಎಂದು ಸ್ವಂತ ವಿಷಯಕ್ಕೆ ಜಿಗಿಯುತ್ತಾಳೆ. 'ಅದು ಬಿಡು, ಎಲ್ಲಾ ಗಂಡಸರೂ ಊದುವ ರೆಡಿಮೇಡ್ ಸುಳ್ಳುಗಳು. ನೀನು ಅದನ್ನೂ ಸತ್ಯವೆಂದು ಮನಸ್ಸಿನಲ್ಲಿ ಇಟ್ಟುಕೊಂಡಿದ್ದೀಯಾ ಹುಚ್ಚೀ' ಎಂದು ಮುಸಿಮುಸಿ ನಕ್ಕರೆ ಅವತ್ತಿನ ಅಡಿಗೆಗೆ ಮೆಣಸಿನಕಾಯಿ ಪುಡಿ ಜಾಸ್ತಿ ಸುರುವಿದಳು ಎಂದೇ ಅರ್ಥ.

ಹೆಂಡತಿ ರೇಗಿಸಲು ಅವರ ಊರಿನ ವಿಷಯ, ಅವರಪ್ಪನ ಸಂಗತಿ, ಇಲ್ಲವೇ ಮದುವೆಯಲ್ಲಿ ಆದ ಸಣ್ಣಪುಟ್ಟ ಕಿರಿಕಿರಿಗಳನ್ನಷ್ಟೇ ಎತ್ತಿಕೊಂಡರೂ ಸಾಕು, ಇಡೀ ಒಂದು ದಿನದ ಜಗಳಕ್ಕೆ ತೊಂದರೆಯಿರುವುದಿಲ್ಲ. ಆ ದಿನ ಸಿಂಹಿಣಿಯಂತಾಗಿ ತನ್ನೂರು, ತನ್ನ ತವರಿನ ಬಗ್ಗೆ ವಕಾಲತ್ತು ವಹಿಸಿ ಭಾವುಕವಾಗುವ ಇವಳನ್ನು ಮಕ್ಕಳು ಆಶ್ಚರ್ಯದಿಂದ ನೋಡುತ್ತವೆ. 'ಅಪ್ಪ ಅಮ್ಮನಿಗೆ ಇವತ್ತೇನಾಗಿದೆ?' ಎಂದು ಮುಗ್ಧವಾಗಿ ನನ್ನಲ್ಲಿ ಕೇಳುತ್ತವೆ. 'ನನ್ನ ಮದುವೆಯಲ್ಲಿ ಆದ ಮೋಸಗಳನ್ನು ನೆನಪು ಮಾಡಿ ಕೊಟ್ಟೆ ಅಷ್ಟೇ. ಅದಕ್ಕೆ ಹೆಂಗೆಲ್ಲಾ ಎಗರಾಡುತ್ತಿದ್ದಾಳೆ ನೋಡು' ಎಂದು ಅನುಕಂಪ ಲೇಪಿತ ಧ್ವನಿ ರೂಪಿಸಿ ಅವರನ್ನೂ ಛೂ ಬಿಡುತ್ತೇನೆ. ಕುದಿಯುತ್ತಿರುವ ತಾಯಿಯಲ್ಲಿ ಕಕ್ಕುಲಾತಿ ಹೆಚ್ಚಾದ ಮಕ್ಕಳು 'ಏನದು ಮದ್ವೆ ಕಥೆ ನಮಗೂ ಹೇಳಮ್ಮ' ಎಂದು ಬೇಡಲು ಹೋಗಿ ಉಗಿಸಿಕೊಂಡು ಬರುತ್ತವೆ. ಆಕೆಯ ತವರು ಮನೆ ವಿಷಯ ಎತ್ತಿದಾಗೆಲ್ಲಾ ಹೀಗೊಂದು ಪುಟ್ಟ ಧಾರಾವಾಹಿ ನಮ್ಮಲ್ಲಿ ನಡೀತಾನೆ ಇರುತ್ತದೆ.

ಮೊದಮೊದಲು ನಾನು ಛೇಡಿಸುತ್ತಿದ್ದಾಗ ತುಂಬಾ ಸೀರಿಯಸ್ಸಾಗಿ ಎಗರಾಡಿಕೊಂಡು ಜಗಳಕ್ಕೆ ಬರುತ್ತಿದ್ದ ಈಕೆ ಯಾಕೋ ಇತ್ತೀಚೆಗೆ ಬದಲಾಗಿದ್ದಾಳೆ. ಒಂದು ವ್ಯಂಗ್ಯದ ನಗೆ ನನ್ನ ಮೇಲೆ ಬಿಸಾಕಿ ಸುಮ್ಮನಾಗುತ್ತಿದ್ದಾಳೆ. ಈಗ ಬುದ್ಧಿ ತಿಳಿದ ಮಕ್ಕಳು ನನ್ನ ಅವಳ ನಡುವೆ ಆಗಾಗ ಜಗಳ ಹಚ್ಚಲು, 'ಅಪ್ಪ ನಿಮ್ಮ ಮದುವೆಯಲ್ಲಿ ಏನೇನಾಯಿತು ಹೇಳಿ. ಆಗ ನಾವಿಬ್ಬರೂ ಅಲ್ಲಿರಲಾಗಲಿಲ್ಲ' ಎಂದು ಚುಡಾಯಿಸುತ್ತವೆ. ನನಗೋ ಈ ವಿಷಯದಲ್ಲಿ ಬಾಯಾಡಿಸಲು ಸದಾ ತವಕ. ನನ್ನ ನಾಲಿಗೆ ಹೊರಳುವ ಮೊದಲೇ ಆಕೆ ಕಿವಿಗಳು ಎಚ್ಚೆತ್ತು, 'ಏಯ್ ನಿಮಗೆ ಮಾಡೋಕೆ ಕೆಲ್ಸ ಇಲ್ವಾ? ಎದ್ದು ಓದ್ಕೊಳಕ್ಕೆ ಹೋಗ್ರೋ. ಅವರಿಗೆ ಕೆತ್ತೋಕೆ ಏನೂ ಕೆಲಸ್ ಇಲ್ಲ ಅಂದ್ರೆ ನಿಮಗೂ ಇಲ್ವಾ. ಎಷ್ಟೇ ಆಗ್ಲಿ ತರೀಕೆರೆಯವರಲ್ವ? ಪಕ್ಕಾ ತರ್ಲೆ ಜನ. ಕ್ವಾಟ್ಲೇ ಮಾಡ್ತಾನೆ ಇರ್ತಾರೆ' ಎಂದು ನಮ್ಮೂರಿನ ಮೇಲೆ ಮರುದಾಳಿ ಮಾಡುತ್ತಾಳೆ. 'ಯಾಕೆ ನಮ್ಮೂರು ತಂಟೆಗೆ ಬರ್ತಿಯಾ' ಎಂದು ಸಣ್ಣ ಉಸಿರೆತ್ತಿದರೆ ಸಾಕು. ನಿಂತು ಹೋದ ಜಗಳದ ನಮ್ಮ ಜಡಿಮಳೆ ಮತ್ತೆ ಶುರುವಾಗುತ್ತದೆ. ಯಾವುದೇ ಗಂಡ ಹೆಂಡತಿ ನಡುವೆ ಬೆಂಕಿ ಹಚ್ಚಲು 'ನಿಮ್ಮ ಮದುವೆ ಹೇಗಾಯಿತು?' ಎಂಬ ಜುಜುಬಿ ಪ್ರಶ್ನೆ ಒಗೆದರೆ ಸಾಕು. ಗಂಟೆಗಟ್ಟಲೆ ಬಿಟ್ಟಿ ಕಾರ್ಯಕ್ರಮವನ್ನೇ ನೋಡಬಹುದು.

ಗೆಳೆಯ ಜಿ.ಎಫ್.ಕುಟ್ರಿ ತನ್ನ ಮದುವೆಯ ಕರುಣಾಜನಕ ಕಥೆ ಹೇಳಿದ್ದ. ವರನಿಗೆ ಹರಿದ ಪಂಚೆ ಕೊಟ್ಟಿದ್ದು, ಆತನಿಗಾಗದ ಸೈಜಿನ ಒಳ ಉಡುಪುಗಳನ್ನು ಸಂತೆಯಲ್ಲಿ ಹೆಣ್ಣಿನಪ್ಪ ಇಪ್ಪತ್ತು ರೂಪಾಯಿಗೆ ನಾಲ್ಕರಂತೆ ತಂದಿದ್ದು, ರಾತ್ರಿ ತಿಗಣೆ ಹಾಗೂ ಸೊಳ್ಳೆಗಳಿದ್ದ ಚೌಲ್ಟ್ರಿಯಲ್ಲಿ ಮಲಗಿಸಿದ್ದು, ಸ್ನಾನಕ್ಕೆ ಬಿಸಿ ನೀರು ಕೊಡದೇ ಸತಾಯಿಸಿದ್ದು, ಲಗ್ನದ ನಂತರದ ಊಟದ ಹೊತ್ತಿನಲ್ಲಿ ಲಾಡನ್ನು ಟವಲಿನಲ್ಲಿ ಬಿಗಿದು ಕಟ್ಟಿ ಹೊತ್ತೊಯ್ಯುತ್ತಿದ್ದ ತನ್ನ ಕಡೆಯವರನ್ನು ಹೆಣ್ಣಿನ ಕಡೆಯವರು ತಡೆದು ನಿಲ್ಲಿಸಿ ಅವಮಾನಿಸಿದ್ದು ಇಂಥ ಹಲವಾರು ಹಲವಾರು ಪ್ರಸಂಗಗಳನ್ನು ನನಗೆ ಹೇಳಿದ್ದ. ಈ ವಿಷಯಗಳನ್ನೇ ಒಮ್ಮೆ ಕೆದಕಿಕೊಂಡು ಅವನ ಶ್ರೀಮತಿಯವರ ಮುಂದೆ 'ಏನ್ರಿ